# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 31-03-2021 ಪ್ರಶ್ನೆ ಸಂಖ್ಯೆ : 3031 (2467)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಹೆಚ್.ಎಂ.ರಮೇಶಗೌಡ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 31-03-2021

ಉತ್ತರಿಸುವ ಸಚಿವರು: ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ವಿಷಯ : ಬೆಂಗಳೂರಿನ ಕಬ್ಬನ್‌ಪಾರ್ಕ್‌ನಲ್ಲಿರುವ ಕೆ.ಎಫ್.ಡಿ.ಸಿ ಬಗ್ಗೆ

(ಅ) ಬೆಂಗಳೂರು ಕಬ್ಬನ್ ಪಾರ್ಕ್‌ನಲ್ಲಿರುವ ಕೆ.ಎಫ್.ಡಿ.ಸಿ ಘಟಕ ಮತ್ತು ಇದರ ವ್ಯಾಪ್ತಿಯಲ್ಲಿರುವ ಮೀನು ಮಾರಾಟ ಮಳಿಗೆಗಳು ಯಾವುವು; 2015-16 ರಿಂದ ಇಲ್ಲಿಯವರೆಗೂ ಈ ಮಳಿಗೆಗಳಿಗೆ ಖರೀದಿ ಮಾಡುತ್ತಿರುವ ಮೀನಿನ ಪ್ರಮಾಣ ಎಷ್ಟು; ಯಾರಿಂದ ಖರೀದಿಸಲಾಗಿದೆ; ಖರೀದಿ ಮೌಲ್ಯ ಎಷ್ಟು; (ಮಾಹೆವಾರು ಹಾಗೂ ಮೀನು ಜಾತಿವಾರು ವಿವರ ಒದಗಿಸುವುದು)

(ಆ) 2015-16 ರಿಂದ ಇಲ್ಲಿಯವರೆಗೂ ಈ ರೀತಿ ಖರೀದಿ ಮಾಡಿದ ಮೀನನ್ನು ಮಾರಾಟ ಮಾಡಿರುವ ಪ್ರಮಾಣ ಎಷ್ಟು; ಬಂದ ಆದಾಯ ಎಷ್ಟು ಹಾಗೂ ಉಳಿದ ಎಷ್ಟು ಪ್ರಮಾಣದ ಮೀನನ್ನು ಉಪಹಾರ ತಯಾರಿಕೆಗೆ ಬಳಸಿ ಮಾರಾಟ ಮಾಡಲಾಗಿದೆ ಹಾಗೂ ಇದರಿಂದ ಎಷ್ಟು ಆದಾಯ ಬಂದಿದೆಯೆ ; (ಮಾಹೆವಾರು ಹಾಗೂ ಮೀನು ಜಾತಿವಾರು ವಿವರ ಒದಗಿಸುವುದು)

(ಇ) 2015-16 ರಿಂದ ಇಲ್ಲಿಯವರೆಗೂ ಖರೀದಿ ಮಾಡಿದ ಮೀನಿನಲ್ಲಿ ಎಷ್ಟು ಹಾಳಾಗಿವೆ ಹಾಗೂ ಇದರ ಮೌಲ್ಯ ಎಷ್ಟು; ಇದಕ್ಕೆ ಸರ್ಕಾರದಿಂದ ಸೂಕ್ತ ಮನ್ನಾ ಆದೇಶ ಪಡೆಯಲಾಗಿದೆಯೇ; (ದಾಖಲೆಯೊಂದಿಗೆ ವಿವರ ಒದಗಿಸುವುದು)

(ಈ) ಸರ್ಕಾರದ ಎಲ್ಲಾ ಸೇವೆಗಳನ್ನು Online ಮಾಡಲಾಗಿದ್ದರೂ ಸಹ ಸರ್ಕಾರದ ಅಂಗ ಸಂಸ್ಥೆಯಾದ ಕೆ.ಎಫ್.ಡಿ.ಸಿ ಹೋಟೆಲ್‌ನಲ್ಲಿ ನಗದು ವ್ಯವಹಾರ ನಡೆಸುತ್ತಿದ್ದು, ಇದರಿಂದ ಸಾಕಷ್ಟು ಅವ್ಯವಹಾರ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಗ್ರಾಹಕರು Online ಪಾವತಿ ಮಾಡುವಂತೆ ಕ್ರಮಕೈಗೊಳ್ಳದಿರಲು ಕಾರಣಗಳೇನು ;

(ಉ) ಬೆಂಗಳೂರಿನ ಕೆ.ಎಫ್.ಡಿ.ಸಿ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ಯಾರು ಇವರು ಎಷ್ಟು ವರ್ಷಗಳಿಂದ ಇದೇ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಇವರುಗಳನ್ನು ಸರ್ಕಾರ ವರ್ಗಾವಣೆ ನಿಯಮದಂತೆ ಕಾಲಕಾಲಕ್ಕೆ ವರ್ಗಾವಣೆ ಮಾಡದಿರುವುದರಿಂದ ಅವ್ಯವಹಾರ ನಡೆಯುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?